CAREERINDIA

# CCE RF

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2015**

**S. S. L. C. EXAMINATION, MARCH / APRIL, 2015**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 08. 04. 2015 ] ಸಂಕೇತ ಸಂಖ್ಯೆ : **33-K**

Date : 08. 04. 2015 ] CODE No. : **33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**( ಹೊಸ ಪಠ್ಯಕ್ರಮ / New Syllabus )**

**( ಶಾಲಾ ಅಭ್ಯರ್ಥಿ / Regular Fresh )**

[ ಪರಮಾವಧಿ ಅಂಕಗಳು : 80

[ Maximum Marks : 80

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| I. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 8 × 1 = 8 |
| 1. | ಸುಖ ಸಂಪತ್ತಿನ ಕಾಲದಲ್ಲಿ ಜತೆಗಿದ್ದವರು ದುರ್ಭರಗಳಿಗೆಯಲ್ಲಿ ಕೂಡ ಅವರ ಜೊತೆಗಿದ್ದು ಉಪಕಾರ ಸ್ಮರಣೆ ಮಾಡಬೇಕು. | |
| 2. | ಐದು ದಿನಗಳ ಕಾಲ ಆಟ ನೋಡುವುದೆಂದರೆ ಅಷ್ಟು ಮಾನವಶ್ರಮ ವ್ಯರ್ಥ. | |
| 3. | ಮಳೆಯ ರಭಸವನ್ನು ತಡೆದು ನೀರನ್ನು ನಿಧಾನವಾಗಿ ಭೂಮಿಯೊಳಕ್ಕೆ ಇಂಗಿಸಬೇಕಿದ್ದ ಮರಗಳ ನಾಶ. | |
| 4. | ಶಿಷ್ಯರೊಂದಿಗೆ ವೈಜ್ಞಾನಿಕ ವಿಷಯದ ಚರ್ಚೆ, ನಿರ್ವಂಚನೆಯ ಬೋಧನೆ. ಅವರು ಹಾಕಿಕೊಟ್ಟ ಮೇಲ್ಪಾಕ್ತಿ. ವಿಜ್ಞಾನ ವಿಷಯದ ಬೋಧಕರಿಗೆ ಆದರ್ಶವಾಗಿದೆ. | |
| 5. | ಸ್ನಾನ ಮಾಡಿ ಶುಚಿಯಾದ ಬಟ್ಟೆಧರಿಸಿ ಬುಟ್ಟಿಯಲ್ಲಿ ಬನದಿಂದ ಹೂಗಳನ್ನು ಕೊಯ್ದು ತರುವುದಾಗಿತ್ತು. | |
| 6. | ಕೌರವಸೇನೆಯ ಉತ್ತರಕುಮಾರನಿಗೆ ಭೂಮಿಯೇ ಮರಿಹಾಕಿದೆಯೋ (ಪೊಡವಿಯಿಂದುದೊ) ಎಂಬಂತೆ ಕಾಣಿಸಿತು. | |

www.careerindia.com

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
| --- | --- | --- |
| 7. | ಮಗು ತನ್ನ ಮುಗ್ಧತೆಯಿಂದ ಬಾಹುಬಲಿಯ ಹತ್ತಿರ ಯಾರೂ ಇಲ್ಲ ಒಬ್ಬನೇ ಇದ್ದಾನೆ ಭಯವಾಗುವುದಿಲ್ಲವೆ ? ಎನ್ನುತ್ತಾನೆ. | |
| 8. | ಉತ್ತರಕುಮಾರನು ಸುರರ ಸತಿಯರ ಸ್ಥಾನವನ್ನು ನಮ್ಮ ಅರಮನೆಯ ಹೆಂಗಳೆಯರೆ ತುಂಬುತಾರೆ ಎನ್ನುತ್ತಾನೆ. | |
| | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :** | 11 × 2 = 22 |
| 9. | ಗಿಳಿಯು ಇಂದ್ರನನ್ನು ಈ ಮರವು ಮೊದಲಿನಂತೆ ಹಸಿರಿನಿಂದ ಕಳಕಳಿಸುವ, ಫಲಪುಷ್ಪ ಭಾರದಿಂದ ಬೀಗುವ, ನೆರಳನ್ನು ಕೊಡುವ ಹಾಗೆ ಮಾಡು ಎಂಬ ವರವನ್ನು ಕೇಳಿತು. | |
| 10. | ರಾಹುಲ್ ದ್ರಾವಿಡ್ ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನೂ ನಿಭಾಯಿಸುವ, ವಿಕೆಟನ್ನು ಒಪ್ಪಿಸದಿರುವ, ಸಾವಕಾಶವಾಗಿ ರನ್‌ಗಳಿಸುವ, ಅದ್ವಿತೀಯ ಬ್ಯಾಟಿಂಗ್ ಶೈಲಿ, ದಿನವಿಡೀ ಕ್ರೀಸಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಅವರದ್ದು. ಅದೇ ಅವರನ್ನು 'ಗೋಡೆ' ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರಾಗಿದ್ದರು. | |
| 11. | ಪುಟ್ಟರಾಜ ಗವಾಯಿಗಳಿಗೆ ದೊರೆತಿರುವ ಪ್ರಶಸ್ತಿಗಳು,<br>1) ಕರ್ನಾಟಕ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್<br>2) ಕರ್ನಾಟಕ ಸರ್ಕಾರದ ರಾಜ್ಯ ನಾಟಕ ಅಕಾಡೆಮಿ<br>3) ಬಸವಶ್ರೀ<br>4) ಕಾಳಿದಾಸ ಸಂಮಾನ್ (ಮಧ್ಯಪ್ರದೇಶ ಸರ್ಕಾರ) ನಾಡೋಜ, ಪದ್ಮಭೂಷಣ... ಇತ್ಯಾದಿ. | |
| 12. | ಶಿಷ್ಯರು ನಡೆಸುವ ಸಂಶೋಧನೆ ಅತ್ಯುತಮ ವರ್ಗದ್ದಾಗಿರಬೇಕು. ಇತರರನ್ನು ಸುಮ್ಮನೆ ಅನುಕರಿಸುವುದು ಸರ್ವಥಾ ಕೂಡದು. ಸ್ವಂತಿಕೆ ಇರಬೇಕು, ಹೊಸದಾರಿಯನ್ನು ಗುರುತಿಸುವಂತಿರಬೇಕೆಂಬ ನಿರೀಕ್ಷೆಯನ್ನು ಹೊಂದಿದ್ದರು. | |
| 13. | ಜೋಯಿಸರ ಹೆಂಡತಿಗೆ ಬೇರೆಲ್ಲರಿಗಿಂತ ಆ ಕುರ್ಚಿಯ ಮೇಲೆ ಅಷ್ಟೊಂದು ನಂಬಿಕೆ. ಜೋಯಿಸರಿಂದ ನಿಮಿತ್ಯ ಕೇಳಿ ಹೋದವರೋ, ಜಾತಕ ತೋರಿಸಿದವರೋ ನಾಲ್ಕು ಒಳ್ಳೆಯ ಮಾತು ಹೇಳಿದರೆ, ಅದೆಲ್ಲ ಹಿರಿಯ ಪುಣ್ಯ ಎಂದು ಹೇಳಿ ಮನಸ್ಸಿನಲ್ಲಿಯೇ ಆ ಕುರ್ಚಿಗೆ ನಮಸ್ಕರಿಸುವ ಭಾವನೆಯನ್ನು ಹೊಂದಿದ್ದರು. | |
| 14. | ಸಾವಿತ್ರಿಯು ಮಾಡಿದ ಅಡುಗೆಯನ್ನೆಲ್ಲಾ ಸಂಬಂಧಕರಿಗೆ ಬಡಿಸಿದಾಗ ಪ್ರಯಾಸದಿಂದ ಊಟ ಮುಗಿಸಿದರು. ತಾನು ಮಾಡಿದ ಅಡಿಗೆಯ ವಿಚಾರ (ವಿವರ)ವನ್ನು ತನ್ನ ಗಂಡನಿಗೆ ತಿಳಿಸಲು ಎರಡನೆಯ ಬಾರಿ ದೂರವಾಣಿಯ ಕಡೆಗೆ ಓಡಿದಳು. | |
| 15. | ಉನ್ನತವಾದ ಗುರಿಯನ್ನು ತಲುಪಲು ಯಾವುದೇ ರೀತಿಯ ದೈಹಿಕ ನ್ಯೂನತೆಗಳು ಅಡ್ಡಿಯಾಗಲಾರವು. ಅದರ ಜೊತೆಯಲ್ಲಿ ಅಸಾಧ್ಯವಾದುದನ್ನು ಸಾಧಿಸಬೇಕೆಂಬ ಛಲವು ಸೇರಿಕೊಂಡರೆ ಗುರಿಯು ಮತ್ತು ಹತ್ತಿರವಾಗುತ್ತದೆ. ಏಕಾಗ್ರತೆ, ಅರ್ಪಣಾ ಮನೋಭಾವ ಇದ್ದಾಗ ನಮ್ಮಲ್ಲಿನ ದೈಹಿಕ ನ್ಯೂನತೆಗಳು ಅಡ್ಡಿಯಾಗದೆ ಸಾಧನೆ ಅವಕಾಶವಾಗುತ್ತದೆ. | |
| 16. | ಮಗುವಿಗೆ ತಾಯಿಯು ಎಣ್ಣೆಹಚ್ಚಿ ಸ್ನಾನ ಮಾಡಿಸುವಾಗ ಬೆತ್ತಲೆಯಾಗಿ ನಿಲ್ಲಿಸಿ ನೀರನ್ನು ಎರೆಯುವಳು, ಅಂತೆಯೆ (ಗೊಮ್ಮಟೇಶ್ವರನಿಗೆ) ಬಾಹುಬಲಿಗೂ ಮಹಾ ಮಸ್ತಕಾಭಿಷೇಕವು ನಡೆಯುವುದರಿಂದ ಸು.ರಂ. ಎಕ್ಕುಂಡಿಯವರು ಮಗುವೂ, ಬಾಹುಬಲಿಯೂ ಒಂದೇ ಎಂದು ಹೋಲಿಸಿದ್ದಾರೆ. | |

CAREERINDIA



| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 17. | ಆಡಂಬರ, ಪ್ರದರ್ಶನ ಇವುಗಳಿಗೆ ಜನಮನ ಸೋಲುವುದು ಸಾಮಾನ್ಯ ಸಂಪತ್ತು, ಹೆಸರು, ಕೀರ್ತಿ ಇವುಗಳನ್ನು ಪಡೆಯುವುದೇ ಜೀವನದ ಗುರಿ ಎಂದು ತಿಳಿದಿದ್ದಾರೆ. ಆದರೆ ನಮ್ಮೆಲ್ಲರ ಬಾಳಿಗೆ ಆಧಾರವಾಗಿರುವ ಪ್ರಕೃತಿ ಸದ್ದು ಗದ್ದಲವಿಲ್ಲದೆ ತನ್ನೆಲ್ಲಾ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತದೆ.<br><br>ತಟ್ಟೆಯಲ್ಲಿನ ಕರ್ಪೂರವು ಮೌನವಾಗಿ ಉರಿಯುವ ರೀತಿ; ದೀಪದ ಎದುರಿಗೆ ಕತ್ತಲೆಯು ಸರಿಯುವಂತೆ ಪ್ರತಿಯೊಬ್ಬರೂ ತನ್ನದಾದ ಕರ್ತವ್ಯವನ್ನು ಸದ್ದುಗದ್ದಲವಿಲ್ಲದೆ ಮಾಡಬೇಕೆಂದು ಸಿ.ಪಿ.ಕೆ.ಯವರು ಹೇಳಿದ್ದಾರೆ. | |
| 18. | ಹೆತ್ತ ತಾಯಿಗೆ ಮಕ್ಕಳೆಲ್ಲ ಸಮಾನರು, ಹಸಿವಾದ ಮಕ್ಕಳಿಗೆ ಹತ್ತಿರದಲ್ಲೆಲ್ಲೂ ಮನೆಯಿಲ್ಲ, ಹಸಿವನ್ನು ಬಲ್ಲ ತಾಯಿ ಒಳಗಿಲ್ಲ, ತಾಯಿಗೆ ತೊಟ್ಟಿಲದ ಮಗುವನ್ನು ಕಂಡಾಗ ಹಸಿವು ಅಡಗುವುದು. | |
| 19. | ಉತ್ತರಕುಮಾರನು ಹೆಂಗಳೆಯರ ಮುಂದೆ ನನಗೆ ಒಬ್ಬ ಸಾರಥಿಯು ದೊರೆತರೆ ಕೌರವ ಸೇನೆಯನ್ನು ನುಚ್ಚುನುರಿ ಮಾಡುತ್ತೇನೆಂದು ಜಂಭ ಕೊಚ್ಚಿಕೊಳ್ಳುತ್ತಾನೆ. ಅರ್ಜುನನು ಸಾರಥಿಯಾಗಿ ಸಿಕ್ಕ ಬಳಿಕ ಯುದ್ಧಕ್ಕೆ ಹೊರಟು, ರಣಭೂಮಿಯಲ್ಲಿ ಕೌರವನ ಸೈನ್ಯವನ್ನು ನೋಡಿ ರಥದಿಂದ ಜಿಗಿದು ಓಡಲು ಅನುವಾದಾಗ ಅರಮನೆಯ ವನಜ ಮುಖಿಯರ ಮುಂದೆ ಏನೆಂದು ಸೊರಹಿದೆ, ಆದರೆ ಈಗ ಏನಾಯಿತು; ನಾಡ ನರಿಯಂತೆ ಹಲನ್ನು ಕಿರಿದರೆ ನಾನು ನಿನ್ನನ್ನು ಬಿಡುವುದಿಲ್ಲ. 'ಕಾದುನಡೆ' ಎಂದು ಅರ್ಜುನನು ಉತ್ತರಕುಮಾರನಿಗೆ ಗದರಿ ಹೇಳುತ್ತಾನೆ. | |
| | **ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯ :** | 2 × 3 = 6 |
| | ಕೃತಿ / ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ | 2 ಅಂಕಗಳು |
| | ಒಟ್ಟು | 3 ಅಂಕಗಳು |
| 20. | "ಸಹ್ಯ ಪರ್ವತವೂ ಈಗ ಅಸಹ್ಯ ಪರ್ವತವಾಗಿದೆ"<br>*ಗದ್ಯ :* ಪಶ್ಚಿಮ ಘಟ್ಟಗಳ ಪತನ<br>*ಕರ್ತೃ :* ನಾಗೇಶ ಹೆಗಡೆ<br>*ಯಾರು–ಯಾರಿಗೆ :* ಲೇಖಕರು ಪಶ್ಚಿಮ ಘಟ್ಟಗಳ ನಿರ್ನಾಮದ ಬಗ್ಗೆ ಸಮಾಜಕ್ಕೆ ಅರಿವನ್ನುಂಟು ಮಾಡುವಾಗ.<br>*ಸಂದರ್ಭ :* ಕೊಡಲಿ, ಗುದ್ದಲಿ, ಸಿಡಿಮದ್ದುಗಳಿಂದ ಪಶ್ಚಿಮ ಘಟ್ಟಗಳು ತತ್ತರಿಸುತ್ತಿವೆ. ನೋಡನೋಡುತ ನಿರ್ನಾಮವಾಗುತ್ತಿವೆ. ಸಹ್ಯಾದ್ರಿ ಸಹನೆ ಕಳೆದುಕೊಳ್ಳುತ್ತಿವೆ. ಸಹಸ್ರಾರು ವರ್ಷಗಳಿಂದ ವಿವಿಧ ಬಗೆಯ ಜೀವಕೋಟಿಗಳಿಗೆ ಆಶ್ರಯ ನೀಡಿದ ಈ ಸಹ್ಯಪರ್ವತ ಈಗ ಅಸಹ್ಯ ಪರ್ವತಗಳಾಗುತ್ತಿದೆ ಎನ್ನುತ್ತಾರೆ. | |



www.careerindia.com

CAREERINDIA



| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | "ಇದ್ದಿ, ನೀನು ಇದ್ದೀ, ನೀನು ಇರಬೇಕು" | |
| | *ಪದ್ಯ :* ಅರಿವು | |
| | *ಕರ್ತೃ :* ಸುಕನ್ಯ ಮಾರುತಿ | |
| | *ಯಾರು–ಯಾರಿಗೆ :* ಮಹಾಮನೆಯ ನಿತ್ಯದಾಸೋಹಕ್ಕೆ ಬೇಯಿಸಿ ಬಿಡಿಸಿ ಸೋತು ಸುಣ್ಣವಾಗಿ ಹಾಸಿಗೆಗೆ ಉರುಳಿದಾಗ ತನ್ನಲ್ಲಿಯೇ ಹೇಳಿಕೊಳ್ಳುತ್ತಾರೆ ಕವಯಿತ್ರಿ. | |
| | *ಸಂದರ್ಭ :* ಹಾಸಿಗೆಯಲ್ಲಿ ಮಲಗಿದಾಗ ಏನೋ ಏನೋ ಕಳೆದುಕೊಂಡಂತೆ ಮೈಯೆಲ್ಲಾ ಮುಟ್ಟಿಮುಟ್ಟಿ ನೋಡಿಕೊಂಡಾಗ ತನ್ನ ಇರುವಿಕೆಯ ಅರಿವಾಗದೆ ಗಾಬರಿಯಾಗಿ ಚೀರಿಕೊಂಡಾಗ ಅವಳ ಅಂತರಾತ್ಮ ಇದ್ದೀ, ನೀನು ಇದ್ದೀ ಎಂದು ಅಂತರಾತ್ಮ ಹೇಳುತ್ತದೆ. | |
| | **ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ವಿವರಿಸಿ ಬರೆಯುವುದು :** | $2 \times 3 = 6$ |
| 22. | ಕುವೆಂಪು | |
| | *ಜನ್ಮಸ್ಥಳ* : ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ | |
| | *ಕಾಲ* : ೧೯೦೪–೧೯೯೪ | |
| | *ಕೃತಿ* : ಶ್ರೀರಾಮಾಯಣ ದರ್ಶನಂ, (ನವಿಲು, ಜಲಗಾರ, ಪಕ್ಷಿಕಾಶಿ) | |
| 23. | ಬಸವರಾಜ ಸಾದರ | |
| | *ಜನ್ಮಸ್ಥಳ* : ಧಾರವಾಡ ಜಿಲ್ಲೆಯ ಕುಂದಗೋಳ | |
| | *ಕಾಲ* : ೧೯೫೫ | |
| | *ಕೃತಿ* : ಸಿಸಿಫಸರ ಸುತ್ತು (ಅನುಮತಿ, ತಪ್ಪಂಡ...) | |
| | **ಪದ್ಯಭಾಗ ಪೂರ್ಣ ಮಾಡುವುದು :** | $1 \times 3 = 3$ |
| 24. | ನೀರ ಕಂಡಲ್ಲಿ ಮುಳುಗುವರಯ್ಯ<br>ಮರನ ಕಂಡಲ್ಲಿ ಸುತ್ತುವರಯ್ಯ<br>ಬತ್ತುವ ಜಲವ ಒಣಗುವ ಮರನ<br>ಮೆಚ್ಚಿದವರು ನಿಮ್ಮನ್ನೆತ್ತಬಲ್ಲರು ಕೂಡಲ ಸಂಗಮದೇವ.<br>**ಅಥವಾ**<br>ವೇದಾಂತವನೋದಿ ಫಲವೇನಯ್ಯ<br>ಬ್ರಹ್ಮ ತಾನಾಗದನ್ನಕ್ಕ<br>ನಾನಾ ಕೆರೆಯ ತೋಡಿ ಫಲವೇನಯ್ಯ<br>ಪುಣ್ಯತೀರ್ಥಗಳು ಬರದನ್ನಕ್ಕ ಕಪಿಲಸಿದ್ಧ ಮಲ್ಲಿಕಾರ್ಜುನ. | |

www.careerindia.com

CAREERINDIA



| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | 2 × 4 = 8 |
| 25. | ಭಾರತದಲ್ಲಿ ರೇಶನ್ ಪದ್ಧತಿ ಜಾರಿಗೆ ಬಂತು. ನಮ್ಮ ರಾಜ್ಯದಲ್ಲಿ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಅಕ್ಕಿ ಮತ್ತು ಸಕ್ಕರೆಯನ್ನು ಸರ್ಕಾರದ ಪರವಾನಗಿಯಿಲ್ಲದೆ ಒಯ್ಯುವಂತಿರಲಿಲ್ಲ. ಆ ಸಮಯದಲ್ಲಿ ಅಜ್ಜನಿಗೆ ಬಿಜಾಪುರದಿಂದ ಒಂದು ಪತ್ರ ಬಂತು. ಧಾರವಾಡದಿಂದ ಒಂದಷ್ಟು ಅಕ್ಕಿಯನ್ನು ತರಬೇಕೆಂದು ತಿಳಿಸಿತ್ತು. ಅಜ್ಜನಿಗೆ ಕಾಯಿದೆ ಗೊತ್ತಿತ್ತು. ಆದರೆ ಪ್ರೀತಿ ಕಾಯಿದೆಯನ್ನು ಮೀರಲು ಪ್ರೋತ್ಸಾಹಿಸಿತು. ಅಜ್ಜನು ಐದು ಕಿಲೋ ಅಕ್ಕಿಯನ್ನು ಹಾಸಿಗೆ ಸುರುಳಿಯಲ್ಲಿ ಸುತ್ತಿ ರೈಲಿನಲ್ಲಿ ಹೊರಟರು.<br><br>ವಿಜಾಪುರದ ರೈಲು ನಿಲ್ದಾಣದಲ್ಲಿ ಹಾಸಿಗೆಯ ಸುರುಳಿಯಲ್ಲಿನ ಅಕ್ಕಿಯನ್ನು ಲೇಖಕರನ್ನು ಕೈಯಲ್ಲಿಡಿದುಕೊಂಡು ಯಾರ ಕೈಗೂ ಸಿಗಬಾರದೆಂಬ ಜಾಗರೂಕತೆಯಿಂದ ಹೊರಬರಬೇಕೆನ್ನುವಷ್ಟರಲ್ಲಿ ಅಜ್ಜನ ಹೆಗಲ ಮೇಲೆ ಪೊಲೀಸಿನವ ಕೈಯಿಟ್ಟಾಗ! ಅಜ್ಜ ಹೆದರಿ ಬೆವರಿದರು. "ನಡೀರಿ, ನಿಮ್ಮನ್ನು ಸಾಹೇಬ್ರು ಕರೀತಿದಾರೆ" ಎಂದು ಗುಡುಗಿದ. ತಾನು ಅಕ್ಕಿಯನ್ನು ತಂದಿರುವ ವಿಚಾರ ಗೊತ್ತಾಯಿತಲ್ಲ ಎಂದು ಗಾಬರಿಯಾದ ಅಜ್ಜ ಪೊಲೀಸು ತೋರಿಸಿದ ಜೀಪಿಗೆ ಹತ್ತುವಾಗ, ಹೋಗ್ರಿ, ಸಾಹೇಬ್ರನ್ನ ಭೇಟಿ ಆಗ್ರಿ ಎಂದು ಹೇಳಿದನು.<br><br>ಅಜ್ಜ ತನ್ನನ್ನೇ ನಿಂದಿಸುತ್ತಾ, ಎಲ್ಲದಕ್ಕೂ ಕಾರಣವಾದ ಅಕ್ಕಿಯ ಗಂಟನ್ನು ಒಯ್ಯುತ್ತಾ ಸಾಹೇಬರ ಮನೆಯನ್ನು ತಲುಪಿದರು.<br><br>**ಅಥವಾ**<br><br>ನಿವೃತ್ತ ಶಿಕ್ಷಕರಾದ ಅಜ್ಜ ತನ್ನ ಸಂಬಂಧಿಕರಿಗೆ ರೇಶನ್ ಪದ್ಧತಿ ಜಾರಿಯಲ್ಲಿದ್ದರೂ ಹೃದಯದ ಪ್ರೀತಿಯಲ್ಲಿ ಸಿಲುಕಿ ಅಕ್ಕಿಯನ್ನು ಧಾರವಾಡದಿಂದ ಬಿಜಾಪುರಕ್ಕೆ ತೆಗೆದುಕೊಂಡು ಹೋಗುವಾಗ ರೈಲು ನಿಲ್ದಾಣದಲ್ಲಿ ಪೊಲೀಸನೊಬ್ಬ ಅಜ್ಜನ ಹೆಗಲ ಮೇಲೆ ಕೈಯಿಟ್ಟು ಸಾಹೇಬರು ಭೇಟ್ಟಿ ಮಾಡಲು ಹೋಗುತ್ತಾರೆ.<br><br>ಅಜ್ಜ ಸಾಹೇಬರ ದೊಡ್ಡ ಬಂಗಲೆಯನ್ನು ಪ್ರವೇಶಿಸಿದಾಗ ಅಂತಹ ಬಂಗಲೆಯನ್ನು ನೋಡಿರಲಿಲ್ಲ. ಆಶ್ಚರ್ಯದಿಂದ, ಭಯದಿಂದ ನಿಂತಿದ್ದ ಅಜ್ಜನನ್ನು ಒಬ್ಬ ಪೊಲೀಸಿನವ ಒಳಗಿನಿಂದ ಬಂದು "ಒಳಗೆ ಬನ್ನಿ ಸಾಹೇಬರು ಕರೀತಿದ್ದಾರೆ" ಎಂದ. ಒಳಗೆ ಹೋದ ಅಜ್ಜ ದೊಡ್ಡ ಹಾಲಿನಲ್ಲಿ ಒಬ್ಬ ದಾಂಡಿಗ ಕಪ್ಪು ಮನುಷ್ಯ, ದೊಡ್ಡ ಕಲ್ಲಿಮೀಸೆ ಹೊತ್ತು ನಿಂತಿದ್ದ ವ್ಯಕಿಯನ್ನು ಅಜ್ಜ ನೋಡಿದರು. ಆಗ ಆ ವ್ಯಕ್ತಿ ಅಪರಾಧೀಭಾವದಿಂದ ಕೈಮುಗಿದು "ತಪ್ಪಾತರೀ ಸಾಹೇಬರ" ಎಂದು ದೀರ್ಘದಂಡ ನಮಸ್ಕಾರವನ್ನು ಅಜ್ಜನಿಗೆ ಮಾಡುತ್ತಾನೆ.<br><br>ಪೊಲೀಸಿನವನಿಗೆ ತಮ್ಮ ದೊಡ್ಡ ಸಾಹೇಬರು ಈ ರೀತಿ ಯಾರಿಗೂ ನಮಸ್ಕಾರ ಮಾಡಿರುವುದಿಲ್ಲ. ಇದನ್ನು ಆಶ್ಚರ್ಯ ವ್ಯಕ್ತಪಡುತಾನೆ.<br><br>"ಸಾಹೇಬ್ರ ನನ್ನ ಗುರುತು ಹತ್ತಲಿಲ್ಲರೀ ಸರ್" ? ಎಂದಾಗ ಇಲ್ಲ ಎಂದಾ ಅಜ್ಜ; ನಾನ್ರೀ ಸರ್ ಭೀಮ, ಮುರುಗೋಡ ಭೀಮ್ಯಾ ಎಂದು ತನ್ನ ಪರಿಚಯ ಹೇಳಿ ತನ್ನ ಹಿಂದಿನ ವ್ಯಾಸಂಗಕ್ಕೆ ಅಜ್ಜ (ಶಿಕ್ಷಕರು) ಮಾಡಿದ ಸಹಾಯ ಹೇಳಿದಾಗ ನನ್ನ ಮನದಲ್ಲಿ ಆ ಚಿತ್ರ ಅಚ್ಚಳಿಯದೇ ನಿಂತಿದೆ. ಎಂದು ಹೇಳಿ ಇಬ್ಬರೂ ತಬ್ಬಿಕೊಳ್ಳುತ್ತಾರೆ. ಸಾರ್ಥಕ ಶಿಕ್ಷಕತ್ವದ ಹೆಗ್ಗುರುತು. ಇದು ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ನೊಬೆಲ್‌ಗೆ ಸಮವಾಗಿದೆ ಎಂದು ಲೇಖಕರು ತಮ್ಮ ಅನುಭವದ ಮಾತುಗಳನ್ನು ಹೇಳುತ್ತಾರೆ. | |

www.careerindia.com

CAREERINDIA



| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ಮಾನವತೆಯ ಸಾರ್ಥಕತೆ ಬಗ್ಗೆ ಗುರಿ ಕವನದ ಮೂಲಕ ಎಂ. ಗೋಪಾಲಕೃಷ್ಣ ಅಡಿಗರವರು ಈ ರೀತಿ ಹೇಳುತ್ತಾರೆ. ಬದುಕಿಗೊಂದು ಗುರಿ ಇಲ್ಲಿದ್ದರೆ ಎಲ್ಲಿಗೆ ಹೋಗಬೇಕೆಂಬ ನಿಶ್ಚಿತತೆಯಿರುವುದಿಲ್ಲ.<br>ಮಾನವನಲ್ಲಿ ದೈವತ್ವವನ್ನು, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರರ ಹಿತಕ್ಕಾಗಿ ಕರ್ತವ್ಯಪರನಾಗಿ, ಸ್ವಾರ್ಥದ ಜೊತೆ ಜೊತೆಯಲ್ಲಿಯೇ ಪರಾರ್ಥದಲ್ಲೂ ಜೀವನ ಸಾರ್ಥಕ್ಯವನ್ನು ಕಾಣಬೇಕು. ಸಮಾಜದಿಂದ ನೂರಾರು ಪ್ರಯೋಜನ ಪಡೆದು ಬೆಳೆದ ನಾವು ಅದೇ ಸಮಾಜಕ್ಕೆ ಸ್ವಲ್ಪವಾದರೂ ಮರಳಿಸಬೇಕು. ನಮ್ಮ ಜೀವನ ಶೈಲಿಯಿಂದ ಸಾಧ್ಯವಾಗಬೇಕೆಂದು ಈ ಕೆಳಗಿನ ಪದ್ಯದ ಮೂಲಕ ತಿಳಿಸಿದ್ದಾರೆ.<br>ನರನೊಳಗೆ ನಾರಾಯಣನ ರೂಪುಕಂಡು, ತಿರೆಯೊಳಗೆ ಸುರಪುರದ ಮೈಸಿರಿಯನುಂಡು ಪರಹಿತಕೆ ಬಳಲುತಿರಲದುವೆ ಜೀವನವು ಪೆರತೇನಸಗಿದರು ನಮಗೆ ಲಾಂಛನವು ಎಂದಿದ್ದಾರೆ.<br>**ಅಥವಾ**<br>ಜೀವನದ ಪರಮ ಗುರಿಯ ಬಗ್ಗೆ ಎಂ. ಗೋಪಾಲಕೃಷ್ಣ ಅಡಿಗರು ಬದುಕಿಗೊಂದು ಗುರಿ ಇರಬೇಕು. ಅದಿಲ್ಲದಿದ್ದರೆ ಅಪಾರವಾದ ಕಡಲಲ್ಲಿ ಚುಕ್ಕಾಣಿ ಇಲ್ಲದೆ ನೌಕೆಯನ್ನು ನಡೆಸಿದಂತೆ, ಬಾಲ್ಯದ ದಿನಗಳಲ್ಲಿ ನಿರ್ದಿಷ್ಟ ಗುರಿಯನ್ನು ನಿಶ್ಚಯಿಸಲು ಆಗುವುದಿಲ್ಲವಾದರೂ ಪ್ರೌಢಶಾಲೆಯ ಓದು ಮುಗಿದ ನಂತರ ಅದು ಖಚಿತರೂಪ ತಾಳುತ್ತದೆ.<br>ಸ್ವೀಕರಿಸಿದ ಆ ಗುರಿಯನ್ನು ನಿರ್ವಹಿಸಲು ಕಷ್ಟ ಎನಿಸಿದರೂ ವೈಯಕ್ತಿಕ ಮತ್ತು ಪರಿವಾರದ ಹಾಗೂ ದೇಶದ ಶ್ರೇಯಸ್ಸಿಗಾಗಿ ಎದುರಾಗುವ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಮುಂದೆ ಸಾಗಬೇಕು.<br>ಗಾಳಿ ಬಂದಾಗ ತೂರಿಕೊಳ್ಳುವ ಹೇಡಿತನ, ದಾಳಿ ಬಂದಾಗ ಶರಣಾಗುವ ಹೆಣ್ತನ ಇರಬಾರದು. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹದೊಳಗೆ ಒಂದೇ ಆತ್ಮವಿರುವಂತೆ ಒಂದೇ ಹೆಗ್ಗುರಿಯನ್ನು ಹೊಂದಬೇಕೆಂದು ಜೀವನದ ಪರಮಗುರಿಯ ಬಗ್ಗೆ ಹೇಳಿದಾರೆ. | |
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | $12 \times 1 = 12$ |
| 27. | (ಸಿ) ಹತ್ತಿರ | |
| 28. | (ಬಿ) ಜೋಡುನುಡಿ | |
| 29. | (ಸಿ) ಗಣೇಶ | |
| 30. | (ಡಿ) ಕಜ್ಜ | |
| 31. | (ಸಿ) ಕರ್ಮಧಾರಯ | |
| 32. | (ಡಿ) ದ್ವಿತೀಯ | |
| 33. | (ಬಿ) ಶಾಲೆ | |



www.careerindia.com

CAREERINDIA



| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | (ಡಿ) ಷಟ್ಪದಿ | |
| 35. | (ಬಿ) ರೂಪಕ | |
| 36. | (ಎ) ಹೊಳೆಯುವ | |
| 37. | (ಸಿ) ಅವನು | |
| 38. | (ಎ) ಬೆನ್ನಟ್ಟು | |
| | **ಅಪಠಿತ ಗದ್ಯ :** | 4 × 1 = 4 |
| 39. | ಬಡ ರೈತನು ತನ್ನ ಸಾಂಪ್ರದಾಯಕ ಸಾವಯವ ಕೃಷಿ ಪದ್ಧತಿಯಿಂದ ವ್ಯವಸಾಯ ಮಾಡುತ್ತಿದ್ದನು. | |
| 40. | ನೆರೆಹೊರೆಯ ಕೆಲವು ರೈತರು ಆಧುನಿಕ ಕೃಷಿ ಪದ್ಧತಿಯನ್ನು ಅನುಸರಿಸುತ್ತಿದ್ದರು. | |
| 41. | ಆಧುನಿಕ ಕೃಷಿ ಪದ್ಧತಿಯಲ್ಲಿ ಬೆಳೆಗಳಿಗೆ ಕೆಲವು ಮಾಂಣಾಂತಿಕ ಕೀಟನಾಶಕಗಳನ್ನು ಬಳಸುತ್ತಾರೆ. ಇಂತಹ ಬೆಳೆಗಳ ಉಪಯೋಗದಿಂದ ಕರುಳು ರೋಗ, ಹೃದಯ ಸಂಬಂಧಿ, ಶ್ವಾಸಕೋಶದ ರೋಗಗಳು ಬರುತ್ತದೆ. | |
| 42. | ಬಡ ರೈತನು ಸಾಂಪ್ರಾದಾಯಿಕ ಕೃಷಿ ಪದ್ಧತಿಯಲ್ಲಿ ಬೆಳೆದ ಬೆಳೆಗಳನ್ನು ಉಪಯೋಗಿಸಿ ಯಾವುದೇ ತೊಂದರೆಯಿಲ್ಲದೆ ಸುಖವಾಗಿ ಜೀವನ ಸಾಗಿಸುತ್ತಿದ್ದನು. | |
| 43. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | ಗಾದೆಯ ಮಹತ್ವ, ಅರ್ಥ | 1 ಅಂಕ |
| | ಉದಾಹರಣೆಯೊಂದಿಗೆ ಸಮರ್ಥನೆ | 2 ಅಂಕ |
| | ಒಟ್ಟು | 3 ಅಂಕಗಳು |
| 44. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ಗೆ ವಿಳಾಸ | 1 ಅಂಕ |
| | ಒಟ್ಟು | 4 ಅಂಕಗಳು |
| | *ಅಥವಾ* | |

www.careerindia.com

CAREERINDIA



| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಒಟ್ಟು | 4 ಅಂಕಗಳು |
| 45. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 2 ಅಂಕಗಳು |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |

www.careerindia.com